(ವ) ರಾಜ್ಯದಲ್ಲಿ ತರಕಾರಿ ಬೆಲೆ ಕುಸಿತಗೊಂಡಿರುವುದು.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಇತ್ತೀಚಿನ ಕಳೆದ ೩-೪ ತಿಂಗಳಿಂದ ರಾಜ್ಯದ ರೈತರು ಬೆಳೆದಂತಹ ತರಕಾರಿ ಬೆಳೆಗಳು ಕುಸಿತಗೊಂಡಿವೆ. ವಿಶೇಷವಾಗಿ ಟೊಮೋಟೋ ಕ್ಯಾರೆಟ್, ಬೀನ್ಸ್, ಬದನೆಕಾಯಿ ವಿಶೇಷವಾಗಿ ಎಲೆಕೋಸು ನಮ್ಮ ಜಿಲ್ಲೆಯಲ್ಲಂತೂ ಹೆಚ್ಚಾಗಿ ಬೆಳೆಯತಕ್ಕಂಥ ಜಿಲ್ಲೆ ಎಂದು ಗೊತ್ತಿದೆ. ಕಳೆದ ೩-೪ ತಿಂಗಳಿಂದ ಬೆಲೆ ಕುಸಿದು ರೈತರು ಕಂಗಾಲಾಗಿರತಕ್ಕಂಥ ಒಂದು ದೃಶ್ಯವನ್ನು ತಾವು ಪ್ರತ್ಯಕ್ಷವಾಗಿ ಕಂಡಿರತಕ್ಕಂಥಾದ್ದು ಪತ್ರಿಕೆಗಳಲ್ಲಿ ನಾನು ಓದಿದ್ದೇನೆ. ತಾವು ಇತ್ತೀಚೆಗೆ ಕೋಲಾರಕ್ಕೆ ಹೋಗತಕ್ಕಂಥ ಸಂದರ್ಭದಲ್ಲಿ ರಸ್ತೆಯಲ್ಲಿ ಹತ್ತಾರು ಲೋಡ್ ಟೋಮೋಟೊ ಸುರಿದು ಬಹಳ ಧಾರುಣವಾದಂತಹ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಟೋಮೋಟೊ ಮೇಲೆ ವಾಹನವನ್ನು ಚಲಿಸುವುದಕ್ಕೆ ಸಾಧ್ಯವಿಲ್ಲ ಅದಕ್ಕೆ ನಾನು ವಾಪಸ್ಸು ಹೋಗುತ್ತೇನೆ ಎನ್ನುವಂತಹ ವಿಚಾರವನ್ನು ಪತ್ರಿಕೆಯಲ್ಲಿ ಓದಿದ್ದೇನೆ. ತಮ್ಮ ಮನಸ್ಸು ನೊಂದು ಅಂತಹ ಧಾರುಣ ದುಸ್ಥಿತಿಯನ್ನು ಕಂಡು ನಿಮ್ಮ ಕಾರು ವಾಪಸ್ಸು ಬಂತು ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ಅಂತಹ ಕರುಣಾಜನಕವಾದಂತಹ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ಉದ್ಭವವಾಗಿದೆ.

ಶ್ರೀ ಸಿ. ಆರ್. ಸಗೀರ್ ಅಹಮದ್: ಇವರ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ರಸ್ತೆ ಮೇಲೆ ಟೋಮೋಟೊ ಚೆಲ್ಲುವಂತಾದ್ದು, ಅಗ್ರಿಕಲ್ಚರ್ ಮಿನಿಸ್ಟರ್ ಕಲಿಸಿಕೊಟ್ಟಿರುವುದರಿಂದ ಅವರು ರಸ್ತೆ ಮೇಲೆ ಹಾಕಿದ್ದಾರೆ.

ಶ್ರೀ ವಿ. ಮುನಿಯಪ್ಪ : ನಿಜವಾದಂತಹ ಪರಿಸ್ಥಿತಿ ಇದ್ದಂತಹ ಸಂದರ್ಭದಲ್ಲಿ ರೈತರ ಆ ನೋವಿಗೆ ಸ್ಪಂದಿಸಬೇಕಾದಂತಹ ಜವಾಬ್ದಾರಿ ಅವರು ಮಾಡಿದರು ಎಂದು ನಾವಂತೂ ತಿಳಿದುಕೊಂಡಿದ್ದೇವೆ. ಅದೇ ರೀತಿ ಅವರಿಗೆ ಅಧಿಕಾರ ಬಂದಾಗ ಅದನ್ನು ಜ್ಞಾಪಕ ಮಾಡಿಕೊಂಡು ಅದಕ್ಕೆ ಏನಾದರೂ ಪರಿಹಾರ ಹುಡುಕುತ್ತಾರೆ ಎಂದು ನಾನು ಬಹಳ ನಿರೀಕ್ಷೆ ಮಾಡಿದ್ದೆವು. ಅವರು ಬಹಳ ದೀರ್ಘಕಾಲ ವ್ಯವಸಾಯ ಮಂತ್ರಿಗಳು ಆಗಿರತಕ್ಕಂಥ ಅವಕಾಶ ಸಿಕ್ಕಿತು.

ಅಧ್ಯಕ್ಷರು : ನಾನು ಒಂದು ಸಲಹೆ ತಮಗೆ ಕೊಡುತ್ತೇನೆ. ಕೇಂದ್ರದ ಕೃಷಿ ಸಚಿವರಿಂದ ಒಂದು ಸಭೆಗೆ ಬರಬೇಕೆಂದು ಆಹ್ವಾನ ಬಂದಿದ್ದರಿಂದ ಇವತ್ತು ನನ್ನ ಅನುಮತಿ ಪಡೆದುಕೊಂಡು ಅವರು ಡೆಲ್ಲಿಗೆ ಹೋಗಿದ್ದಾರೆ. ಮಾನ್ಯ ಬೈರೇಗೌಡರು ಇರುವ ಸಮಯದಲ್ಲಿ ಈ ವಿಚಾರವನ್ನು ಮತ್ತೆ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಹಾಗೂ ಅವರ ಕಡೆಯಿಂದಲೇ ಉತ್ತರ ಕೊಡಿಸುತ್ತೇನೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಅದು ಆಗಬಹುದು. ಆದರೆ ರೈತರಿಗೆ ಇರತಕ್ಕಂಥ ಪ್ರಿವೇಲಿಂಗ್ ಸಿಚ್ಯುಯೇಷನ್ ಬಗ್ಗೆ ಕನಿಷ್ಟ ಅನುಕಂಪ ಇರಬೇಕು. ಅವರಿಗೆ ಇನ್ನೂ ಕೆಲವು ಸಮಸ್ಯೆಗಳು ಇವೆ. ಅವರಿಗೆ ಟೈಂ ಬೇಯಿಂಗ್ ರಿಲೀಫ್ ಕೊಡತಕ್ಕಂಥದ್ದು, ಅಧಿಕಾರ ಅವರಿಗೇ ಇರುವುದರಿಂದ, ಕೆಲವು ಒತ್ತಾಯಗಳನ್ನು,.....

ಅಧ್ಯಕ್ಷರು : ನಾನು ಏನು ಹೇಳುತ್ತೇನೆಂದರೆ ಇವತ್ತು ನೀವು ಪ್ರಸ್ತಾಪ ಮಾಡಬೇಕು ಎಂದರೆ ನಿಮಗೆ ಅವಕಾಶ ಕೊಡುತ್ತೇವೆ. ಆದರೆ ಕೃಷಿ ಮಂತ್ರಿಗಳು ಬಂದರೆ ಅಗ್ರಿಕಲ್ಚರ್ ಪೈಸ್ ಪಾಲಿಸಿ ಸರ್ಕಾರದ್ದು ಏನಿದೆ ಅದನ್ನು ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ

ಸವಿಸ್ತಾರವಾದಂತಹ ಉತ್ತರವನ್ನು ನಾನು ಅವರ ಕಡೆಯಿಂದ ನಿಮಗೆ ಕೊಡಿಸುತ್ತೇನೆ. ಇದನ್ನು ನಮ್ಮ ಜಿಲ್ಲೆಯ ರೈತರ ಹಿತದೃಷ್ಟಿಯಿಂದ ನಾನು ಹೇಳುತ್ತಿರುವುದು. ಏಕೆಂದರೆ ನಿಮ್ಮ ಪ್ರಶ್ನೆಗೆ ಸಮಂಜಸವಾದ ಉತ್ತರ ಸಿಗಬೇಕು.

ಶ್ರೀ ವಿ. ಮುನಿಯಪ್ಪ : ಈಗ ತತ್‌ಕ್ಷಣಕ್ಕೆ ಒಂದೆರಡು ವಿಚಾರವನ್ನು ತಮ್ಮ ಮುಖಾಂತರ ಹೇಳುತ್ತೇನೆ. ಬಹಳ ಪ್ರಮುಖವಾಗಿ ರೈತರಿಗೆ ಲೋನ್ ರಿಕವರಿ ಆಗುತ್ತಿದೆ. ಅದು ಬಹಳ ಸೀರಿಯಸ್ ಆಗಿ ಆಗುತ್ತಿದೆ. ಮಾರ್ಚ್ ೩೧ ರೊಳಗೆ ಯಾರ್‍ಯಾರು ಹಣ ಕಟ್ಟಬೇಕು ಅವರ ಮನೆ ಜಫ್ತಿ ಮಾಡಬೇಕೆಂದು ಹೇಳಿ ಲೋನ್ ರಿಕವರಿ ಡ್ರೈವ್ ಎಂದು ಹೊರಟಿದ್ದಾರೆ. ಇದನ್ನು ಪಿ. ಎಲ್. ಡಿ. ಹಾಗೂ ಇತರೆ ಬ್ಯಾಂಕುಗಳು ಈ ರೀತಿ ಮಾಡುವುದಕ್ಕೆ ಹೊರಟಿರಬೇಕಾದರೆ ಇಂತಹ ಪರಿಸ್ಥಿತಿಯಲ್ಲಿ ಅದರ ಜೊತೆಗೆ ಬಹಳ ವರ್ಷಗಳಿಂದ ಎಂದರೆ ಸುಮಾರು ೭-೮ ವರ್ಷಗಳಿಂದ ಕೆ. ಇ. ಬಿ. ಅರಿಯರ್ಸ್ ಏನಿತ್ತು ಅದನ್ನು ತತ್‌ಕ್ಷಣ ಕಟ್ಟಬೇಕು ಇಲ್ಲದೆ ಇದ್ದರೆ ಅದನ್ನು ಡಿಸ್‌ಕನೆಕ್ಷನ್ ಡ್ರೈವ್ ಎಂದು ಮಾಡುತ್ತೇವೆಂದು ಕೆ. ಇ. ಬಿ. ಯವರು ದೊಡ್ಡದಾಗಿ ಪ್ರಚಾರ ಮಾಡಿಕೊಂಡು ಹೊರಟ್ಟಿದ್ದಾರೆ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಇರತಕ್ಕಂಥ ರೈತರಿಗೆ ಅವರು ತೆಗೆದುಕೊಂಡು ಹೋದಂತಹ ತರಕಾರಿಗಳು ಮಾರ್ಕೆಟಿಗೆ ಹೋಗಿ ಕೇವಲ ಬಾಡಿಗೆ ಹಣ ಕೂಡ ಸಿಗದೇ ಇರುವಂತಹ ಸಂದರ್ಭದಲ್ಲಿ ಈ ಲೋನ್ ರಿಕವರಿ ಹಾಗೂ ಕೆ. ಇ. ಬಿ. ಅರಿಯರ್ಸ್ ಕೊಡದೆ ಡಿಸ್‌ಕನೆಕ್ಟ್ ಏನು ಮಾಡುತ್ತಿದ್ದಾರೆ ಅದನ್ನು ಸರ್ಕಾರ ತಕ್ಷಣ ನಿಲ್ಲಿಸಬೇಕು. ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಗಮನ ಹರಿಸಬೇಕಾಗುತ್ತದೆ.

ಅಧ್ಯಕ್ಷರು : ದರ್ಶನಾಪುರ್ ಅವರೇ, ಇದರ ಬಗ್ಗೆ ಮೊನ್ನೆ ಕೂಡ ಪ್ರಸ್ತಾಪ ಬಂದಿದೆ. ತಾವು ಒಂದು ಚೀಟಿಯನ್ನು ಬರೆದು ಕಳುಹಿಸಿದಿರಿ, ಇದನ್ನು ಮುಖ್ಯ ಮಂತ್ರಿಗಳ ಹತ್ತಿರ ಪ್ರಸ್ತಾಪ ಮಾಡಿದ್ದೀರಿ ಎಂದು. ಮಾಡಿಕೊಂಡು ತೀರ್ಮಾನ ಹೇಳಿಬಿಡಿ. ನನಗೆ ಮೊನ್ನೆ ಮಂತ್ರಿಗಳು ಚೀಟಿ ಬರೆದು ಕಳುಹಿಸಿ, ಈ ವಿಚಾರವಾಗಿ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಪ್ರಸ್ತಾಪ ಮಾಡಿದ್ದೇನೆ. ಸ್ಟೋರ್ಟ್ಸ್ ಅನ್ನು ರಿಟೈನ್ ಮಾಡುವುದು ಎಲ್ಲಾ ಕಡೆಗೆ ಹಾಗೂ ಡಿಸ್‌ಕನೆಕ್ಷನ್ ಬಗ್ಗೆ ನಾವು ತೀರ್ಮಾನ ತೆಗೆದುಕೊಳ್ಳುತ್ತಿದ್ದೇವೆ ಎಂದು. ಅದನ್ನು ಅವರು ಅನೌನ್ಸ್ ಮಾಡುತ್ತಾರೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಎಲ್ಲಾ ಕಡೆ ಒತ್ತಾಯ ಇದೆ, ದಯವಿಟ್ಟು ಸ್ಟೋರ್ಸ್ ವಾಪಸ್ಸು ತೆಗೆದುಕೊಳ್ಳುವಂತಹ ಕೆಲಸ ಮಾಡಬೇಕಾಗಿದೆ.

ಅಧ್ಯಕ್ಷರು : ಶಿವಾನಂದ ಪಾಟೀಲ್, ತಾವು ನೋಟೀಸ್ ಕೊಟ್ಟು ತಡವಾಗಿ ಬಂದಿರಿ.

(ಐ) ಮಮದಾಪುರ ೧೧೦ ಕೆ.ವಿ. ಸ್ಟೇಷನ್‌ಗೆ ಜಮೀನು ನೀಡಿದವರಿಗೆ ಪರಿಹಾರಧನ ನೀಡುವಬಗ್ಗೆ.

ಶ್ರೀ ಶಿವಾನಂದ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಕ್ಷಮಿಸಬೇಕು. ನಾನು ಬರುವುದು ತಡವಾಯಿತು. ಮಮದಾಪುರದಲ್ಲಿ ೧೧೦ ಕೆ.ವಿ. ಸ್ಟೇಷನ್ ಈಗಾಗಲೇ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದ್ದು, ಅದಕ್ಕೆ ಭೂಸ್ವಾಧೀನ ಮಾಡಿಕೊಟ್ಟಿರತಕ್ಕಂಥ ಜಮೀನ್ದಾರರಿಗೆ ಪರಿಹಾರ ಧನ ಕೊಡುವುದರಲ್ಲಿ ಬಹಳ ವಿಳಂಬವಾಗಿದೆ. ೩-೪ ತಿಂಗಳಿನಿಂದ ಭೂ ಸ್ವಾಧೀನ ಹಣವನ್ನು ಸಂದಾಯ ಮಾಡುವುದರಲ್ಲಿ